ಮೈಸೂರ ಡಿಸ್ಟ್ರಿಕ್ಟ್.
ಪ್ರಕಟನೆ.

ತಾರೀಖು 6ನೇ ಮೇ 1896.

ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿಯಲ್ಲಿ ಕಂಡ ಹೋಬಳಿಗಳಲ್ಲಿ ಸಂದಲ್ ಮರಗಳನ್ನು ಬೇರು ಸಮೇತವಾಗಿ ಕೀಳಿಸಿ ಪೊರಟು ಕೆತ್ತನೆ ಮಾಡಿ ಅಯಾ ಹೋಬಳಿಗಳಿಗೆ ಬಾಜಾದೆಲ್ಲಿ ಕೋರಿಸಿರುವ ಕೋಣಗಳಿಗೆ 1896ನೇ ಇಸವಿ ಅಕ್ಟೋಬರ್ ಆಖೈರ ವಳಗಾಗಿ ಸಾಗಿಸುವದಕ್ಕೋಸ್ಕರ ದರಖಾಸ್ತುಗಳನ್ನು ಮೈಸೂರ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು 1896ನೇ ಇಸವಿ ಜೂ ತಾರೀಖು 15ರ ವರಗೆ ತೆಗದುಕೊಳ್ಳುತ್ತಾರೆ.

ತಾಲ್ಲೂಕು.	ಹೋಬಳಿ.	ಕೋಣ.	ಮೊತ್ತ.
ಹುಣಸೂರು ..	ಬೆಟ್ಟದಪುರ ..	ಹುಣಸೂರ ..	50 ಟಗ
ಹೆಗ್ಗಡದೇವನಕೋಟೆ ..	ಚಿನ್ನಹಳ್ಳಿ ..	ಡಿಟೋ ..	50 ಟಗ
ಗುಂಡ್ಲು ..	ರಾಘವಾಪುರ ..	ಶ್ರೀರಂಗಪಟ್ಣ ..	25 ಟಗ
ಚಾಮರಾಜನಗರ ..	ಸಂತೆಮರಹಳ್ಳಿ ..	ಡಿಟೋ ..	25 ಟಗ
ಮೈಸೂರು ..	ಸಿಂದವಳ್ಳಿ ..	ಡಿಟೋ ..	25 ಟಗ

2. ತಮ್ಮಾ ದರಖಾಸ್ತುಗಳೂ "ಫಲಾನಾ ಕೋಣಗೆ ಫಲಾನಾ ಹೋಬಳಿಯಿಂದ ಸಂದಲ್ ಮರಗಳನ್ನ ಕೀಳಿಸಿ ಪೊರಟ ಕೆತ್ತನೆಯಿಂದ ಸಾಗಿಸಲು ದರಖಾಸ್ತು," ಯಂಬದಾಗಿ ಮೇಲ್ ವಿಳಾಸ ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಹುಣಸೂರು ಮತ್ತು ಹೆಗ್ಗಡದೇವನಕೋಟೆ ಪ್ರತಿ ಒಂದು ಹೋಬಳಿಗೂ 100 ರೂಪಾಯಿ ಮತ್ತು ಇತರ ತಾಲ್ಲೂಕು ಪ್ರತಿ ಒಂದು ಹೋಬಳಿಗೂ 50 ರೂಪಾಯಿ ಪೆಲೆಯುಳ್ಳ ಕರೆನ್ಸೀ ನೋಟುಗಳಲಿ ಯಾ ಪ್ರೊನೋಟುಗಳಲಿ ರವಾನಿಸಬೇಕು. ದರಖಾಸ್ತುಗಳು 1896ನೇ ಇಸವಿ ಜೂ 16ನೇ ತಾರೀಖಿನಲ್ಲಿ ಹಾಜರು ಇರತಕ್ಕ. ದರಖಾಸ್ತುದಾರ್ರ ಯಾರಿಗೆ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದ ವಡೆಯಲ್ಪಟ್ಟು ಕರೆನ್ಸೀ ನೋಟುಗಳು ವಾಪಸು ಮಾಡಲ್ಪಡುವವು.

3. ಪ್ರತಿ ದರಖಾಸ್ತಿನಲ್ಲಿಯೂ ಮರಗಳನ್ನ ಕೀಳಿಸಿ ಪೊರಟು ಕೆತ್ತನೆ ಮಾಡಿಸುವದಕ್ಕೆ ಸರಮರಕ್ಕೆ ಮತ್ತು ತಲೆ ಕೊನೆಗೆ ಪ್ರತ್ಯೇಕವಾಗಿ ದರ ಟಗ ಒಂದಕ್ಕೆ ಇಪ್ಪೆಂದು ದರ ನಮೂದಿಸಬೇಕು. ಮತ್ತು ಕೋಣಗೆ ರವಾನೆಗೆ ದರ ಟಗ ವಂದಕ್ಕೆ ಜಂಗಲ್ ವೈಲಿ ವಂದಕ್ಕೆ ಇಮ್ಮಡಿದರ ವೆಂತಲೂ ಮತ್ತು ಹೈ ರೋಡು ಮೈಲಿ ವಂದಕ್ಕೆ ಯಿಪ್ಪತ್ತು ದರ ವೆಂತಲೂ ಪ್ರತ್ಯೇಕವಾಗಿ ನಮೂದಿಸಬೇಕು.

4. ಯಾವ್ದೂ ಮರಗಳೂ ತಾಯಿಬೇರು ಕಾಲುಬೇರು ಮತ್ತು ಪಕ್ಕದ ಬೇರುಗಳ ಪೈಂಬಿಗೆ ಕೀಳಿಸಲ್ಪಡಬೇಕು. ಜವಿಸಿನಲ್ಲಿ ಜೇಗು ಇರತಕ್ಕ ಮರಗಳು ಯಾವದೂ ಬಿಡಲ್ಪಡಕೂಡದು. ಮರಗಳ ರೆಂಬೆಗಳು ಕೊಡ್ಲಿಯಿಂದ ಕತ್ತರಿಸಲ್ಪಡಕೂಡದು. ಗರಗಸದಿಂದ ಕೊಯ್ಯಲ್ಪಡಬೇಕು. ದೇರಿನಲ್ಲಿ ಇರತಕ್ಕ ಮಂಣು ಮತ್ತು ಕಲ್ಲು ಜನ್ನಾಗಿ ತೆಗಿಯಲ್ಪಡಬೇಕು. ಮರಗಳ ಕಿಪ್ಪೆ ಮತ್ತು ಬಿಳೇ ಜಕ್ಕೆಯನ್ನು ಒಕಳ ಹುಷಾರಿನಿಂದ ಮೊದಲು ಮಚ್ಚು ಕತ್ತಿಯಿಂದ ಕೆತ್ತಿ ನಂತರ ಪೋಳಿಗಿನ ಜೇಗು ಪೋಲಾಗದಂತೆ ಬಾಚಿಯಿಂದ ಕೆತ್ತಬೇಕು. ಮರದ ಜೇಗಿನ ಮೇಲೆ ಯಾವ ಸಂದರ್ಭದಲ್ಲೂ ಕಾಲಂಗುಲ ದಪ್ಪಕ್ಕಿಂತ ಜಾಸ್ತಿಯಾಗಿ ಬಿಳೇ ಮರ ಬಿಡಕೂಡದು. ಬುಕಣಿ ಮತ್ತು ಜೇಗು ಇರತಕ್ಕ ಜಕ್ಕೆ ಮರಗಳಜೊತೇಲೇ ಸಾಗಿಸಲ್ಪಡಬೇಕು.

5. ಒಂದು ಅಂಗುಲಕ್ಕಿಂತ ಜಾಸ್ತಿದಾಗಿ ಜೇಗುವುಳ್ಳ ಕಿಪ್ಪೆ ತಲೆಗಳು ಜಂಗಲ್‌ಗಳಲ್ಲಿ ಬಿಡಕೂಡದು. ಪೊರಟು ಕೆತ್ತನೆ ಮಾಡಿದ ಹಾಗೆಯೇ ಕೋಣಗೆ ರವಾನಿಸಬೇಕು. ಅಂಥಾ ತಲೆ ಕೊನೆಗಳಿಗೆ ರವಾನೆ ಚಾರ್ಜ್ ಮಾತ್ರ ಪಾವತಿ ಮಾಡಲ್ಪಡುತ್ತೆ.

6. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಪ್ರತಿ ಮಾಹೆಯಲ್ಲೂ ಯಷ್ಟು ಹೊತ್ತಕಥೂರಿಯಿಂದ ಸಾಗಿಸಲ್ಪಡಬೇಕೆಂದು ವಿಧಾಯಕ ಮಾಡುತ್ತಾರೋ ಅಷ್ಟು ವೊತ್ತವನ್ನ ಖಂಡಿತವಾಗಿ ಕೋಣಗಳಿಗೆ ತಯಾರಿಯಿಂದ ರವಾನಿಸಬೇಕು. ಇದಕ್ಕೆ ತಪ್ಪಿದಲ್ಲಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದ ಮೊಕರರ್ರಾಡಲ್ಪಡುವ ಪೆನಾಲ್ಟಿಗೆ ಗುರಿಯಾಗತಕ್ಕದ್ದು.

7. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ತನ್ನ ದರಖಾಸ್ತು ಮಂಜೂರ್ಮಾಡಲ್ಪಟ್ಟ ತರುವಾಯ ತಾನು ಬರದುಕೊಡುವ ಕರಾರು ಮೇರಗೆ ಕ್ರಮವಾಗಿ ನಡೆದುಕೊಳ್ಳುವ ಬಗ್ಗೆ ಜಾಮೀನ್ ತರ್ಕ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಪ್ರತಿ ಒಂದು ಹೋಬಳಿಗೆ 200 ರೂಪಾಯಿನ ಡಿಪಾಜಿಟ್ ಮತ್ತು ಇತರ ತಾಲ್ಲೂಕುಗಳ ಪ್ರತಿ ಒಂದು ಹೋಬಳಿಗೆ 100 ರೂಪಾಯಿನ ಡಿಪಾಜಿಟ್ ಕಟ್ಟಬೇಕು. ಮೇಲ್ಕಂಡ ಪರತ್ತುಗಳ ಮೇರೆ ನಡಿಯಲೂ ತಪ್ಪಿದಲ್ಲಿ ಕೇವಣೀ ಮೊಬಲಗು ಸರಕಾರಕ್ಕೆ ಕೇರಿಕೊಳ್ಳಲ್ಪಡುತ್ತೆ.

8. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು ಛಾಪಾ ಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

9. ಸಂದಲ್ ಮರಗಳ ಜುನಾಯಿಸೋಣ, ಕೀಳುವಿಕೆ ಪೊರಟು ಕೆತ್ತನೆ ಮತ್ತು ಅದೇವಿಷಯಗಳಲ್ಲಿ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ಮಾಡುವ ರೂಲ್ಸ ಮತ್ತು ಕಾನೂನುಗಳಿಗೆ ಕಂಟ್ರಾಕ್ಟುದಾರನು ಖಂಡಿತವಾಗಿ ಬದ್ಧನಾಗಿ ಇರತಕ್ಕದ್ದು.

10. ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರು ತಮ್ಮ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ ಮತ್ತು ಅಂಥಾ ಅಂಗೀಕಾರವಿಲ್ಲ ಫಾರೆಸ್ಟ ಕನ್ಸರ್ವೇಟರ್ ಸಾಹೆಬರವರ ಮಂಜೂರಾತಿಗೆ ವಳಪಟ್ಟು ಇರುತ್ತೆ.

11. ಪ್ರಸ್ತಾಪಿಸುವ ಕಂಟ್ರಾಕ್ಟುದಾರನು ಅಪೇಕ್ಷಿಸುವ ಇತರ ಜಾಸ್ತೀ ಸಂಗತಿಗಳನ್ನು ಮೈಸೂರ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಟಿ. ಅಮ್ಮಲ್‌ಕಾಮ್,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ್.

ತಾರೀಖು 5ನೇ ಮೇ 1896.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ:—ಮೈಸೂರ ಡಿಸ್ಟ್ರಿಕ್ಟಿಗೆ ಕೇರಿದ ಇದರಡಿ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಜಮೀನುಗಳು ಆಡಿರುವ ಸರ್ಕಾರಿ ಖಂಬರ್ ಜಮೀನುಗಳಲ್ಲಿಯೂ, ಅಮೃತಮಹಲ್ ಕಾವಲುಗಳಲ್ಲಿಯೂ, ಹಳೆ ಮತ್ತು ಹೊಸ ಡಿವಾರ್ಕೇಷನ್ ಲೈನುಗಳ ಮಧ್ಯೆ ಇರುವ ಡಿಸ್ಟ್ರಿಕ್ಟ ಫಾರೆಸ್ಟುಗಳಲ್ಲಿಯೂ, ಗ್ರಾಮ ಬೇಲಿಗಳ ಅಮರಾಯಿ, ಮತ್ತು ಅಮರಾಯಿ ಬೇಲಿಗಳಲ್ಲಿ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1896ನೇ ಇಸವಿ ಜುಲೈ ಮಾಹೆ 1ನೇ ತಾರೀಖು ಲಾಗಾಯತು 1897ನೇ ಇಸವಿ ಜೂ॥ 30ನೇ ತಾರೀಖಿನ ವರಗೆ ಜಮಾಯಿಸುವ ಹಕ್ಕು ದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಿಯಾಗಲಿ ಅಥವಾ ಹೋಬಳಿವಾರಿಯಾಗಲಿ ಸರಕಾರಕ್ಕೆ ಅನುಕೂಲವಾಗುವ ರೀತಿಯಾಗಿ ಈ ಕೆಳಗೆ ವಿವರಿಸಿರುವ ಆಫಿಸರವರಿಂದ ಈ ಕೆಳಗೆ ಕಂಡ ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು.

ಸೂಚನೆ:—ಫಾರೆಸ್ಟ ಪ್ಲಾಂಟೇಷನ್‌ಗಳೂ, ಸಂದಲ್ ಮತ್ತು ಫಾರೆಸ್ಟ ರಿಪ್ರೊಡಕ್ಟಿವ್ ಬ್ಲಾಕುಗಳೂ, ಇದಕ್ಕೆ ಕೇರಿ ಇರುವದಿಲ್ಲ.

ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡುವ ಆಫಿಸರವರು.
ಮೈಸೂರು ..	10 6 96	ಮೈಸೂರ ಡಿಸ್ಟ್ರಿಕ್ಟು ಆಫಿಸ್ ಬಳಿ. ..	ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರು
ಯಡತೊರೆ ..	ಡಿಟೋ	ಡಿಟೋ ..	ಡಿಟೋ
ಹುಣಸೂರು ..	ಡಿಟೋ	ಡಿಟೋ ..	ಡಿಟೋ
ಹೆಗ್ಗಡದೇವನಕೋಟೆ ..	ಡಿಟೋ	ಡಿಟೋ ..	ಡಿಟೋ
ಗುಂಡ್ಲುಪೇಟೆ ..	ಡಿಟೋ	ಡಿಟೋ ..	ಡಿಟೋ
ಚಾಮರಾಜನಗರ ..	ಡಿಟೋ	ಡಿಟೋ ..	ಡಿಟೋ
ನಂಜನಗೂಡು ..	ಡಿಟೋ	ಡಿಟೋ ..	ಡಿಟೋ
[redacted]ನರಸೀಪುರ ..	ಡಿಟೋ	ಡಿಟೋ ..	ಡಿಟೋ
ಮಂಡ್ಯ ..	13 6 96	ಫೈಂಚ್‌ರಾಕ್ಸ್‌ಸಬ್ ಡಿವಿಜ್ ಆಫಿನಲ್ಲಿ. .	ಫೈಂಚ್‌ರಾಕ್ಸ್ ಸಬ್ ಡಿವಿಜ್ ಆಫಿಸರವರು
ಮಳವಳ್ಳಿ ..	ಡಿಟೋ	ಡಿಟೋ	ಡಿಟೋ
ಶ್ರೀರಂಗಪಟ್ಟಣ ..	ಡಿಟ್ಟೋ	ಡಿಟೋ ..	ಡಿಟೋ
ಕೃಷ್ಣರಾಜಪೇಟೆ ..	ಡಿಟೋ	ಡಿಟೋ ..	ಡಿಟೋ
ನಾಗಮಂಗಲ ..	ಡಿಟೋ	ಡಿಟೋ ..	ಡಿಟೋ

ಹುಟ್ಟುವಳಿ ತಪ್ಪಿಲ್ಲ.

1. 1 ತಾಡೇಕಾಯಿ, 2 ಕಿಗ್ಗೇಕಾಯಿ, 3 ಆರಳವಾಳದ ಕಾಯಿ, 4 ದಿಂಡಿಗದಗೋಂದು, 5 ಕಾಡುಅರ್ಕಿನ, 6 ಜೇನುಮೇಣ, 7 ಜೇನುತುಪ್ಪ, 8 ಕಪಿಲಾರಂಗು, 9 ಪತಂಗ, 10 ಮಡ್ಡಿ, 11 ಬಿಲ್ಲದ ಬೀಜ, 12 ಹಾಲುಮಡ್ಡಿ, 13 ಜಗಜೇಬೀಜ, 14 ಹೊಂಗೇ ಬೀಜ, 15 ಗೇರುಬೀಜ, 16 ಆವರಿಕೆಗೋಂದು, 17 ಸಾರಗದಕೊಂಬು, 18 ಗುಗ್ಗಳ, 19 ಅಳಲೇಕಾಯಿ, 20 ಕ್ಷೀರಪಣ್ಣು, 21 ಅರಗು, (ಫೈಂಚ್‌ರಾಕ್ಸ್ ಸಬ್ ಡಿವಿಜ್ ತಾಲ್ಲೂಕುಗಳದು ವಿನಹ) 22 ಕಿತಾಫಲದ ಹಣ್ಣು, 23 ಬಂಡಿನಾರು.

2. ಚಪರಾಸ್ತುದಾರನು ಹರಾಜು ಖೈದಾದ ಕೂಡಲೆ ಹರಾಜು ಮೊಬಲಗು ಪೈಕಿ ಕೇಕಡಾ 25ರಂತೆ ಆಗುವ ಮೊಬಲಗನ್ನು ಜೇಬಣಿ ಕಟ್ಟುತಕ್ಕದ್ದು. ಹಾಗೆ ಮಾಡದೆ ಹೋದಲ್ಲಿ ಕೂಡಲೆ ಬಾಬು ಎರಡನೇ ದಫ ಹರಾಜು ಮಾಡಲ್ಪಟ್ಟಿರುವ ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1896ನೇ ಜುಲೈ ತಾರೀಖು 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರಯೇಸಿಸತಕ್ಕದ್ದು. ಮತ್ತು ಕಂಟ್ರಾಕ್ಟು ಮೊಬಲಗ ಪೈಕಿ ಉಳಿದ ಮೊಬಲಗನ್ನೂ ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದಾಣೆಯಂತೆ ಆಗುವ ಲೋಕಲ್‌ಸೆಸ್ ಮೊಬಲಗನ್ನೂ ಸಹ ಮೂರು ಸಮವಾದ ಕಿಸ್ತುಗಳಲ್ಲಿ ಅಂದರೆ—

1896ನೇ ಡಿಸೆಂಬರ್ 1ನೇ ತಾರೀಖು.

1897ನೇ ಜನವರಿ 1ನೇ ತಾರೀಖು.

1897ನೇ ಫಿಬ್ರವರಿ 1ನೇ ತಾರೀಖುಗಳಲ್ಲಿ ಪಾವತಿ ಮಾಡಿಕೊಳ್ಳಬೇಕಾದ್ದು. ಕಿಪ್ತವಾದ ತಾರೀಖುಗಳಲ್ಲಿ ಕಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಕೇಕಡಾ ಸಾಲಿಯಾನಾ 6 ರೂಪಾಯಿ ಮೇರೆ ಎಷ್ಟಿ ಕಟ್ಟಬೇಕಾಗುತ್ತೆ. ಮತ್ತು ವೊಬಲಿಗನ್ನು ಅವನ ಆಸ್ತಿಯಿಂದ ವಿಲೇ ಮಾಡಿಕೊಳ್ಳಲಾಗುತ್ತೆ.

4. ಕಂಟ್ರಾಕ್ಟುದಾರನು ಯಾವ ಒಂದು ಕಿಸ್ತನ್ನು ಪಾವತಿಮಾಡದೆ ಹೋದರೂ, ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1897ನೇ ಜೂನ್ ಆಖೈರುವರಿಗೆ ಉಳಿದಿರುವ ಕಾಲದಲ್ಲಿ ಬಾಕಿ ಜಮಾಮಿನುವದಕ್ಕೂ ಹರಾಜು ಮಾಡಲ್ಪಡುವದು; ಅಥವಾ ಅಮಾನಿಯಲ್ಲಿ ಧೂಡಿಸಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವನು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರೆಯುವ ಫಸಲನ್ನು ಧೂಡಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರವಟ್ಟು ಹಕ್ಕುದಾರಿ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

ಬಿ. ಕೆ. ವೆಂಕಟವರದಯ್ಯಂಗಾರ್,
ಡೆಪ್ಯುಟಿ ಕಮ್ಮಿಷನರ್.

ನಗರ ಡಿವಿಜ಼ನ್ ಡಿಸ್ಟ್ರಿಕ್ಟ್ ಜಡ್ಜ಼ಯವರ ಕೋರ್ಟಿನಲ್ಲಿ.

1895—96ನೇ ಇಸವಿ ಮಿ॥ ಅರ್ಜಿ ನಂಬರ್ 295.

ಅರ್ಜೀದಾರ ಹೊಳ್ಳೆರೆ ತಾಲ್ಲೂಕು ತಾಳ್ಯದ ಮಾಗಣಿ ತಾಳ್ಯದಲ್ಲಿ ವಾಸವಾಗಿರುವ ಬಾಳಯ್ಯನ ವೀರಯ್ಯ, ಮೈಸೂರಾದ ಹೊಳ್ಳೆರೆ ತಾಲ್ಲೂಕು ತಾಳ್ಯದ ಮಾಗಣಿ ತಾಳ್ಯದ ಮಜರೆ ರಂಗಾಪುರ ಸ್ಥಳದ ಬಾಳಯ್ಯನ ವೀರಯ್ಯನ ಮೇಗ ಹನುಮನ ಆಸ್ತಿ ವಿಷಯದಲ್ಲಿ—

ಸದರಿ ಮೈಸೂರಾದ ಹನುಮನಿಗೆ ಜ್ಞಾತಿ ಆಗಬೇಕೆಂಬ ಹಕ್ಕಿನಮೇಲೆ ಹೊಳ್ಳೆರೆ ತಾಲ್ಲೂಕು ತಾಳ್ಯದ ಸ್ಥಳದ ಬಾಳಯ್ಯನ ವೀರಯ್ಯನು ಸದರಿ ಮೈಸೂರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಗೆ ಅರ್ಜಿ ಕೊಟ್ಟು ಇರುತ್ತಾನೆ.

ಸದರಿ ಅರ್ಜಿ ಹಿಯರಿಂಗ್ ಬಗ್ಗೆ 1896ನೇ ಇಸವಿ ಜುಲೈ ತಾರೀಖು 10ರಲ್ಲು ವೊಕರರ್ ಮಾಡಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

1896ನೇ ಇಸವಿ ಮೇ ತಿಂಗಳ 5ನೇ ತಾರೀಖಿನಲ್ಲಿ ಕೋರ್ಟು ನೋಜರ್‌ನಿಂದ ನಮ್ಮ ದಸ್ತಖತ್ತಿನಲ್ಲಿ ಕೊಡಲಾಗಿದೆ.

ಸ॥ 1895—96ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 314.

ಮೃತಪಟ್ಟ ಮಾಡದ ಬಸಪ್ಪನವಗ ಮಲ್ಲಿಕಾರ್ಜುನಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ಸೋಮವಾರನಂತೆ ಚನ್ನವೀರಪ್ಪ ಬಿನ್ ವೀರಪ್ಪ ಕಿಕಾರಿಪುರ ತಾಲ್ಲೂಕು ಕಲ್ಲುಮನೆ ವಾಸಿ, ಮೃತಪಟ್ಟ ಸದರೀ ಮಲ್ಲಿಕಾರ್ಜುನಪ್ಪನಿಗೆ ತಾಯಿ ಅಂಣನಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಕಲ್ಲುಮನೆ ಸ್ಥಳದ ಚನ್ನವೀರಪ್ಪನ ಕಲ್ಲುಮನೆ ವಾಸ ಸ್ಥಳದಾಗಿ ಮೃತಪಟ್ಟ ಮಲ್ಲಿಕಾರ್ಜುನಪ್ಪನ ಜಿಂದಗಿ ಬ್ಯಾಗಿ ಬರಕ್ಕೆ ಸುಮಾರು 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸ॥ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಗೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ರಜಾಸ್ತುದಾರವಾದ ಚನ್ನವೀರಪ್ಪನ ಅರ್ಜಿಯನ್ನು ಸ॥ 1896ನೇ ಇಸವಿ ಜುಲೈ ತಿಂಗಳ ತಾರೀಖು 24ರಲ್ಲು ಕೈಗೆ ಸರ್ಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯು ವಿಚಾರ ಮಾಡಲ್ಪಡುತ್ತೆ, ಆ ಕಾಲದಲ್ಲಿ ಸದರೀ ಮೃತಪಟ್ಟ ಮಲ್ಲಿಕಾರ್ಜುನಪ್ಪನ ಆಸ್ತಿಗೆ ಹಕ್ಕುದಾರರಾದ ವಿಪ್ಪರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯುವಹಿಸಿ ಇದೆ.

ಸ॥ 1895—96ನೇ ಇಸವಿ ಮಿಸಲೇನಿಯಸ್ ಅರ್ಜಿ ನಂಬರ್ 316.

ಮೃತಪಟ್ಟ ವಡ್ಡರ ಕಿನಪ್ಪನ ಆಸ್ತಿ ವಿಷಯದಲ್ಲಿ—

ಅರ್ಜೀದಾರ ವಡ್ಡರ ತಿಮ್ಮಪ್ಪ ಬಿನ್ ವೆಂಕಪ್ಪ, ಮೃತಪಟ್ಟ ಸದರೀ ವಡ್ಡರ ಕಿನಪ್ಪನಿಗೆ ಖಾಸ ವಿಳಕ್ಕ ಅಂಣ ಆಗಬೇಕೆಂಬ ಹಕ್ಕುದಾರಿ ಮೇಲೆ ಹರಿಹರ ಸ್ಥಳದ ವಡ್ಡರ ತಿಮ್ಮಪ್ಪನು, ಹರಿಹರ ವಾಸಸ್ಥನಾಗಿ ಮೃತಪಟ್ಟ ವಡ್ಡರ ಕಿನಪ್ಪನ ಜಿಂದಗಿ ಬ್ಯಾಗಿ